


# ಭಾರತ ಮತ ಮಹಾ ಸಮರ

## ಸಮಾಚಾರ ಸಣ್ಣದಲ್ಲ

### ಲೋಕ ಪ್ರಚಾರ ಗೀತೆ ಕಾಂಗ್ರೆಸ್ ಪ್ರಯೋಗ

**ದೆಹಲಿ:** 2024ರ ಲೋಕಸಭಾ ಚುನಾವಣೆಗಾಗಿ ಕಾಂಗ್ರೆಸ್ ಪಕ್ಷ 'ಪ್ರಚಾರ ಗೀತೆ' ಸಿದ್ಧಪಡಿಸಿದ್ದು, ಸೋಮವಾರ ದೆಹಲಿಯಲ್ಲಿ ಪಕ್ಷದ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಪಕ್ಷದ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಮತ್ತು ವಕ್ತಾರೆ ಸುಪ್ರಿಯಾ ಶ್ರೀನೇತ್ ಬಿಡುಗಡೆ ಮಾಡಿದರು. ಮಹಿಳೆ, ಯುವಜನ, ರೈತ ಮತ್ತು ಕಾರ್ಮಿಕರನ್ನು ಆಧರಿಸಿ 'ಪಂಚ ನ್ಯಾಯ್' ಪರಿಕಲ್ಪನೆಯಲ್ಲಿ ಈ ಪ್ರಚಾರ ಗೀತೆ ಸಿದ್ಧಪಡಿಸಲಾಗಿದೆ ಎಂದು ಜೈರಾಮ್ ರಮೇಶ್ ಹೇಳಿದರು.

### ಮಣಿಪುರ: 18 ಸಾವಿರ ಮತದಾರರ ಸಂಕಷ್ಟ



**ದೆಹಲಿ:** ಜನಾಂಗೀಯ ಸಂಘರ್ಷದಿಂದ ತಿಂಗಳುಗಳ ಕಾಲ ನಲುಗಿರುವ ಮಣಿಪುರದಲ್ಲಿ ಈ ಬಾರಿಯ ಲೋಕಸಭಾ ಚುನಾವಣಾ ಕಾರ್ಯ ಆಯೋಗಕ್ಕೆ ಸವಾಲೆನಿಸಿದೆ. ಹಿಂಸಾಚಾರದ ಭಯದಲ್ಲಿ ಸ್ವಂತ ನೆಲೆಗಳಿಂದ ಓಡಿಹೋಗಿ ರಾಜ್ಯದಲ್ಲಿಯೇ ಬೇರೆ ಸ್ಥಳಗಳಲ್ಲಿ ನೆಲೆಸಿರುವ 18 ಸಾವಿರ ಮಂದಿಗೆ ಅವರು ಈಗ ಇರುವ ಜಾಗದಲ್ಲೇ ಮತದಾನಕ್ಕೆ ಅವಕಾಶ ಮಾಡಿಕೊಡಬೇಕು ಎಂಬ ಮನವಿಗೆ ಸ್ಪಂದಿಸಲು ಸುಪ್ರೀಂ ಕೋರ್ಟ್ ಸೋಮವಾರ ನಿರಾಕರಿಸಿದೆ. ಮೊದಲ ಹಂತದ ಚುನಾವಣೆಗೆ ಇನ್ನು ಕೇವಲ 4 ದಿನಗಳಿರುವಾಗ ಇಂಥ ಅರ್ಜಿಯ ವಿಚಾರಣೆ ಸಾಧ್ಯವಿಲ್ಲ ಎಂದು ಆರಂಭದಲ್ಲೇ ನಿರಾಕರಿಸಿದೆ. ಅಲ್ಲದೇ, ರಾಜ್ಯಾದ್ಯಂತ ಚದುರಿ ಹೋಗಿರುವ 18 ಸಾವಿರ ಮತದಾರರಿಗೆ ಅವರಿರುವ ನೆಲೆಯಲ್ಲೇ ಮತದಾನಕ್ಕೆ ಅಲ್ಪಾವಧಿಯಲ್ಲಿ ವ್ಯವಸ್ಥೆ ಮಾಡುವುದು ಚುನಾವಣಾ ಆಯೋಗಕ್ಕೆ ಅಸಾಧ್ಯವಾದ ಕಾರ್ಯ ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ನ್ಯಾ. ಜೆ.ಬಿ.ಪಾರ್ದಿವಾಲಾ, ನ್ಯಾ. ಮನೋಜ್ ಮಿಶ್ರ ಅವರ ತ್ರಿಸದಸ್ಯ ಪೀಠ ಹೇಳಿದೆ. ಮಣಿಪುರದಲ್ಲಿ ಏ.19ರಂದು ಮೊದಲ ಹಂತದಲ್ಲೆ ಚುನಾವಣೆ ನಡೆಯುವುದು ನಿಗದಿಯಾಗಿದೆ.

# ಇ.ಡಿ. ಅತ್ಯುತ್ತಮವಾಗಿ ಕೆಲಸ ಮಾಡುತ್ತಿದೆ: ಪ್ರಧಾನಿ ಮೋದಿ

**ರಾಜಕೀಯೇತರ ವಿರುದ್ಧವೇ ಹೆಚ್ಚು (ಶೇ.97) ಪ್ರಕರಣ ದಾಖಲು | ಪಾಪ ಮಾಡಿದವರಷ್ಟೇ 'ಇ.ಡಿ' ದಾಳಿ ಬಗ್ಗೆ ಹೆದರಿಕೆ ಇಟ್ಟುಕೊಳ್ಳಬೇಕು | ಪ್ರತಿಪಕ್ಷಗಳು ಅರ್ಥ ಮಾಡಿಕೊಳ್ಳಬೇಕು**



**ದೆಹಲಿ:** ಕೇಂದ್ರದ ತನಿಖಾ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಂಡು ಪ್ರತಿಪಕ್ಷ ನಾಯಕರನ್ನೆಲ್ಲಾ ಬಿಜೆಪಿ ಸರಕಾರ ಜೈಲಿಗಟ್ಟುತ್ತಿದೆ ಎಂಬ ಪ್ರತಿಪಕ್ಷಗಳ ಆರೋಪವನ್ನು ಕಡ್ಡಿಮುರಿದಂತೆ ನಿರಾಕರಿಸಿರುವ ಪ್ರಧಾನಿ ನರೇಂದ್ರ ಮೋದಿ, 'ಜಾರಿ ನಿರ್ದೇಶನಾಲಯ'(ಇ.ಡಿ)ದಿಂದ ಬಂಧನಕ್ಕೊಳಗಾದವರಲ್ಲಿ ಹೆಚ್ಚಿನವರು ರಾಜಕೀಯೇತರ ವ್ಯಕ್ತಿಗಳು ಎಂದು ಸ್ಪಷ್ಟಪಡಿಸಿದ್ದಾರೆ.

'ಎಎನ್ಐ' ಸುದ್ದಿಸಂಸ್ಥೆಗೆ ಸೋಮವಾರ ವಿಶೇಷ ಸಂದರ್ಶನ ನೀಡಿರುವ ಪ್ರಧಾನಿ ಮೋದಿ, ಇ.ಡಿ. ಬಹಳ ಪಾರದರ್ಶಕವಾಗಿ, ಅತ್ಯುತ್ತಮವಾಗಿ ಕೆಲಸ ಮಾಡುತ್ತಿದೆ. 2014ರಲ್ಲಿ ನಾನು ಪ್ರಧಾನಿಯಾದ ಬಳಿಕ ಕೇಂದ್ರದ ತನಿಖಾ ಸಂಸ್ಥೆಗಳೆಲ್ಲವೂ ಪಾರದರ್ಶಕವಾಗಿ ಕೆಲಸ ಮಾಡುತ್ತಿವೆ. ಭ್ರಷ್ಟರನ್ನು ಒಂದು ಕಡೆಯಿಂದ ಹುಡುಕಿ ಸದೆಬಡಿಯುತ್ತಿವೆ. ಅಷ್ಟರ ಮಟ್ಟಿಗೆ ದೇಶದಲ್ಲಿ ಭ್ರಷ್ಟರ ವಿರುದ್ಧ ಯುದ್ಧ ನಡೆದಿದೆ. ಭ್ರಷ್ಟಾಚಾರ ಹಂತ ಹಂತವಾಗಿ ಇಲ್ಲವಾಗುತ್ತಿದೆ ಎಂದರು.

'ಪಾಪ ಮಾಡಿದವರು', ಅಕ್ರಮವಾಗಿ ಹಣ ವರ್ಗಾವಣೆ ಮಾಡಿದವರಷ್ಟೇ 'ಇ.ಡಿ.' ದಾಳಿಗೆ ಹೆದರಬೇಕು. ಪ್ರಾಮಾಣಿಕ ವ್ಯಕ್ತಿಗಳಿಗೆ ಭಯ ಬೇಡ. ಇ.ಡಿ ಬಂಧಿಸಿದವರಲ್ಲಿ ಶೇ.97ರಷ್ಟು ಮಂದಿ ರಾಜಕೀಯ ರಂಗದವರಲ್ಲ. ಇದನ್ನು ಪ್ರತಿಪಕ್ಷಗಳು ಅರ್ಥ ಮಾಡಿಕೊಳ್ಳಬೇಕು ಎಂದು ಹೇಳಿದರು.

ಪ್ರತಿಪಕ್ಷಗಳ ಎಷ್ಟು ನಾಯಕರು ಈಗ ಜೈಲಿನಲ್ಲಿದ್ದಾರೆ? ಪ್ರತಿಪಕ್ಷಗಳನ್ನು ಅದರ ಲೆಕ್ಕ ಕೊಡಲಿ. ಪಾಪದ ಹಣ ಗಳಿಸಿದವರಷ್ಟೇ ಜೈಲು ಸೇರಿದ್ದಾರೆ. ಮಾಫಿಯಾದವರು, ಮಾದಕದ್ರವ್ಯ ಲೋಕದವರು, ಅಕ್ರಮವಾಗಿ ಆಸ್ತಿ ಸಂಪಾದಿಸಿದ ಅಧಿಕಾರಿಗಳು ಜೈಲು ಪಾಲಾಗಿದ್ದಾರೆ. ಅವರಲ್ಲಿ ರಾಜಕೀಯದವರು ಕೇವಲ ಶೇ.3ರಷ್ಟು ಮಾತ್ರ ಇದ್ದಾರೆ ಎಂದರು. ಈ ಉತ್ತರದ ಮೂಲಕ ಪ್ರತಿಪಕ್ಷದವರ ಬಾಯಿ ಮುಚ್ಚಿಸಿದರು.

ದೆಹಲಿ ಮುಖ್ಯಮಂತ್ರಿ, ಎಎಪಿ ನಾಯಕ ಅರವಿಂದ ಕೇಜ್ರಿವಾಲ್ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಇ.ಡಿ.ಯಿಂದ ಬಂಧನಕ್ಕೊಳಗಾದಾಗ 'ಇಂಡಿಯ' ಒಕ್ಕೂಟದ ಪಕ್ಷಗಳು ದೆಹಲಿಯಲ್ಲಿ ಪ್ರತಿಭಟನೆ ನಡೆಸಿದ್ದನ್ನು ಮೋದಿ ಖಂಡಿಸಿದರು.

### 'ಕುಣಿಯಲು ಬಾರದವರು ನೆಲ ಡೊಂಕು' ಎಂದರು: ಮೋದಿ

ಚುನಾವಣಾ ಆಯೋಗದ ಮೂವರು ಆಯುಕ್ತರನ್ನು ನೇಮಕ ಮಾಡುವ 3 ಸದಸ್ಯರ ಆಯ್ಕೆ ಸಮಿತಿಯಲ್ಲಿ ಪ್ರತಿಪಕ್ಷದವರೂ ಇದ್ದಾರೆ ಎಂಬುದನ್ನು ಗಮನಿಸಬೇಕು. ಮೊದಲಾದರೆ ಕಾಂಗ್ರೆಸ್ ಪಕ್ಷಕ್ಕೆ ಹತ್ತಿರವಾದವರೇ ಚುನಾವಣಾ ಆಯೋಗದ ಆಯುಕ್ತರಾಗುತ್ತಿದ್ದರು. ಅಲ್ಲಿಂದ ನಿರ್ಗಮಿಸಿದ ಬಳಿಕ ರಾಜ್ಯಸಭೆ ಪ್ರವೇಶಿಸಿ, ಕೇಂದ್ರ ಸಚಿವರೂ ಆಗುತ್ತಿದ್ದರು ಎಂದು ಹೇಳುವ ಮೂಲಕ ಕಾಂಗ್ರೆಸ್ ಪಕ್ಷವನ್ನು ಮಾತಿನಲ್ಲೇ ತಿವಿದರು.
ಕೇಂದ್ರ ಸಂಸ್ಥೆಗಳು, ಚುನಾವಣಾ ಆಯೋಗದ ದುರ್ಬಳಕೆ ಆಗುತ್ತಿದೆ. ಚುನಾವಣೆ ಎದುರಿಸಲು ಪ್ರತಿಪಕ್ಷಗಳಿಗೆ ಸಮಾನ ವೇದಿಕೆ ಲಭಿಸಿಲ್ಲ ಎಂದು ದೂರುತ್ತಿರುವ ಪ್ರತಿಪಕ್ಷಗಳ ಆರೋಪಕ್ಕೆ ಪ್ರಧಾನಿ ಮೋದಿ, 'ಕುಣಿಯಲು ಆಗದೇ ಇರುವವರು ನೆಲ ಡೊಂಕಾಗಿದೆ' ಎಂದು ಹೇಳಿದಂತೆ ಇದೆ ಪ್ರತಿಪಕ್ಷಗಳ ಈ ಮಾತು ಎಂದರು. ಆ ಒಂದೇ ಮಾತಿನಲ್ಲೇ ಚುನಾವಣೆಗೆ ಸಂಬಂಧಿಸಿದ ಎಲ್ಲಾ ಆರೋಪಗಳನ್ನು ನಿರಾಕರಿಸಿದರು.

### ಆರೋಪಿಸುತ್ತಿರುವವರೇ ರಚಿಸಿದ ಸಂಸ್ಥೆಗಳಿವು!

ಕೇಂದ್ರದ ಬಿಜೆಪಿ ಸರಕಾರ 'ಇ.ಡಿ', ಸಿಬಿಐ, ಆದಾಯ ತೆರಿಗೆ ಇಲಾಖೆ, ಚುನಾವಣಾ ಆಯೋಗ ಮೊದಲಾದ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಂಡು ಪ್ರತಿಪಕ್ಷಗಳನ್ನು ಹಣಿಯಲು ಯತ್ನಿಸುತ್ತಿದೆ ಎಂದು ಕಾಂಗ್ರೆಸ್, ತೃಣಮೂಲ ಕಾಂಗ್ರೆಸ್, ಎಎಪಿ ಸೇರಿದಂತೆ 'ಇಂಡಿಯ' ಒಕ್ಕೂಟದ ಪಕ್ಷಗಳು ಟೀಕಿಸುತ್ತಿರುವುದಕ್ಕೆ 'ಎಎನ್ಐ' ಸಂದರ್ಶನದಲ್ಲಿ ಪ್ರತಿಕ್ರಿಯಿಸಿದ ಪ್ರಧಾನಿ ಮೋದಿ, ಪ್ರತಿಪಕ್ಷಗಳು ಹೇಳುವ ಈ ಕೇಂದ್ರದ ತನಿಖಾ ಸಂಸ್ಥೆಗಳು, ಚುನಾವಣಾ ಆಯೋಗ ಯಾವುದನ್ನೂ ನನ್ನ ಸರಕಾರ ರೂಪಿಸಿದ್ದಲ್ಲ. ಅವುಗಳು ಅನುಸರಿಸುತ್ತಿರುವ, ಜಾರಿ ಮಾಡುತ್ತಿರುವ ಕಾಯಿದೆಗಳು, ನಿಯಮಗಳನ್ನೂ ನಮ್ಮ ಎನ್‌ಡಿಎ ಸರಕಾರ ಮಾಡಿದ್ದಲ್ಲ. ಈಗ ಯಾರೆಲ್ಲಾ ನಮ್ಮ ಸರಕಾರದ ವಿರುದ್ಧ ಆರೋಪ ಮಾಡುತ್ತಿದ್ದಾರೆಯೋ ಅವರ ಆಡಳಿತ ಕಾಲದಲ್ಲಿಯೇ ಈ ಎಲ್ಲಾ ಸಂಸ್ಥೆಗಳು ರೂಪುಗೊಂಡವು, ಕಾಯಿದೆಗಳೂ ರಚನೆಯಾದವು ಎನ್ನುವುದನ್ನು ಪ್ರತಿಪಕ್ಷಗಳು ಮರೆಯಬಾರದು ಎಂದರು.

### 1 ಲಕ್ಷ ಕೋಟಿ ರು. ಮೀರಿದ ಅಕ್ರಮ ಆಸ್ತಿ ವಶ!

2014ಕ್ಕೂ ಮುನ್ನ 'ಇ.ಡಿ.' ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಜಪ್ತಿ ಮಾಡಿದ ಆಸ್ತಿ ಮೌಲ್ಯ ಕೇವಲ 5 ಸಾವಿರ ಕೋಟಿ ರು. 2014ರಿಂದ ಈವರೆಗೆ ಇ.ಡಿ ದಾಳಿಯಲ್ಲಿ ವಶವಾದ ಅಕ್ರಮ ಆಸ್ತಿ ಮೊತ್ತ 1 ಲಕ್ಷ ಕೋಟಿ ರು.ಗಳನ್ನೂ ಮೀರಿದೆ. ಕಳೆದ 10 ವರ್ಷಗಳಲ್ಲಿ ಇ.ಡಿ ವಶಪಡಿಸಿಕೊಂಡ ನಗದು ಮೊತ್ತವೇ 2200 ಕೋಟಿ ರು.ಗಳಾಗಿದೆ. ಇದಿಷ್ಟು ಮೊತ್ತ ಸಾಗಿಸಲು 70 ಚಿಕ್ಕ ಟ್ರಕ್‌ಗಳೇ ಬೇಕಾಗುತ್ತವೆ. ಅದಕ್ಕೆ ಮೊದಲು ವಶವಾದ ನಗದು ಕೇವಲ 34 ಲಕ್ಷ ರು. ಅದನ್ನು ಸ್ಕೂಲ್ ಬ್ಯಾಗ್‌ನಲ್ಲಿ ಸಾಗಿಸಬಹುದು. ಇದರಲ್ಲೇ ಹಿಂದಿನ ಸರಕಾರಕ್ಕೂ ನಮ್ಮ ಸರಕಾರದ ಅವಧಿಗೂ ಇರುವ ವ್ಯತ್ಯಾಸ ತಿಳಿಯುತ್ತದೆ. ಈಗ ಇ.ಡಿ ಅಷ್ಟೊಂದು ಬದ್ಧತೆಯಿಂದ ಕೆಲಸ ಮಾಡುತ್ತಿದೆ. ಈ ಮೊದಲು ದಾಳಿ ಮಾಡದಂತೆ ಇ.ಡಿ.ಯನ್ನು ತಡೆದಿದ್ದವರು ಯಾರು ಎಂಬುದು ಎಲ್ಲರಿಗೂ ಗೊತ್ತಿದೆ. ಅದರಿಂದ ಅನುಕೂಲ ಪಡೆದವರ ಬಗೆಗೂ ಜನರಿಗೆ ತಿಳಿದಿದೆ ಎಂದು ಪ್ರಧಾನಿ ಮೋದಿ ಕುಟುಕಿದರು.

# ಸಾಂವಿಧಾನಿಕ ಸಂಸ್ಥೆಗಳು ಪ್ರಧಾನಿಯ ಸ್ವಂತ ಸ್ವತ್ತಲ್ಲ

**ವಯನಾಡು ಪ್ರಚಾರ ವೇಳೆ ರಾಹುಲ್ ಗಾಂಧಿ ವಾಗ್ದಾಳಿ**



ವಯನಾಡು ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ರಾಹುಲ್ ಗಾಂಧಿ ಸೋಮವಾರ ಬೃಹತ್ ರೋಡ್‌ಷೋ ನಡೆಸಿದರು.

**ವಯನಾಡ್:** ದೇಶದ ಸಾಂವಿಧಾನಿಕ ಸಂಸ್ಥೆಗಳು ಪ್ರಧಾನಿಯಾದವರ ಸ್ವಂತ ಸ್ವತ್ತುಗಳೇನೂ ಅಲ್ಲ, ಅವರ ವೈಯಕ್ತಿಕ ಆಸ್ತಿಯೂ ಅಲ್ಲ ಎಂದು ರಾಹುಲ್ ಗಾಂಧಿ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ತೀಕ್ಷ್ಣ ವಾಗ್ದಾಳಿ ನಡೆಸಿದ್ದಾರೆ.

ತಾವು 2ನೇ ಬಾರಿ ಸ್ಪರ್ಧೆ ಮಾಡಿರುವ ವಯನಾಡು ಲೋಕಸಭಾ ಕ್ಷೇತ್ರದ ವೆಲ್ಲಿಮುಂಡ ಪಟ್ಟಣದಲ್ಲಿ ಸೋಮವಾರ ಚುನಾವಣಾ ಪ್ರಚಾರ ನಡೆಸಿದ ರಾಹುಲ್ ಗಾಂಧಿ, ದೇಶದಲ್ಲಿನ ನ್ಯಾಯಾಂಗ, ಚುನಾವಣಾ ಆಯೋಗ, ಸಿಬಿಐ, ಜಾರಿ ನಿರ್ದೇಶನಾಲಯ, ಆದಾಯ ತೆರಿಗೆ ಇಲಾಖೆ ಮೊದಲಾದ ಸಾಂವಿಧಾನಿಕ ಸಂಸ್ಥೆಗಳನ್ನು ಒಂದೊಂದಾಗಿ ಬಿಜೆಪಿ ತನ್ನ ವಶಕ್ಕೆ ಪಡೆಯಲು ಯತ್ನಿಸುತ್ತಿದೆ ಎಂದು ಗಂಭೀರ ಆರೋಪ ಮಾಡಿದರು. ಇದರ ಮೂಲಕ ಆರ್‌ಎಸ್‌ಎಸ್ ಈ ಸಾಂವಿಧಾನಿ ಸಂಸ್ಥೆಗಳಲ್ಲಿ ತನ್ನವರನ್ನು ನೇಮಿಸುವ ಮೂಲಕ ವ್ಯವಸ್ಥೆಯೊಳಕ್ಕೆ ನುಸುಳಲು ಯತ್ನಿಸುತ್ತಿದೆ ಎಂದೂ ರಾಹುಲ್ ಆರೋಪಿಸಿದರು.

ಈ ಲೋಕಸಭಾ ಚುನಾವಣೆ ಸಂವಿಧಾನವನ್ನು ರಕ್ಷಿಸಲು ಬಯಸುವವರು ಹಾಗೂ ಸಂವಿಧಾನವನ್ನು ನಾಶ ಮಾಡಲು ಬಯಸುವವರ ನಡುವಿನ ಹೋರಾಟವಾಗಿದೆ ಎಂದು ವ್ಯಾಖ್ಯಾನಿಸಿದರು. ಭಾಷಾತೀತ, ಜಾತ್ಯಾತೀತವಾಗಿ ಭಾರತದ ಪ್ರಜೆಗಳ ಹಕ್ಕುಗಳನ್ನು ನಮ್ಮ ಸಂವಿಧಾನವೇ ರಕ್ಷಿಸುತ್ತದೆ ಆಗಿದೆ. ಆದರೆ, ಈ ಚುನಾವಣೆ ಮೂಲಕ ಮತದಾರರು ಸಂವಿಧಾನವನ್ನು ರಕ್ಷಿಸಬೇಕಿದೆ ಎಂದರು.

ಸಂವಿಧಾನ ಬದಲಿಸುವುದಕ್ಕೆ ಆರ್‌ಎಸ್‌ಎಸ್‌ಗೆ ಎಂದಿಗೂ ಕಾಂಗ್ರೆಸ್ ಪಕ್ಷ ಅವಕಾಶ ನೀಡುವುದಿಲ್ಲ ಎಂದೂ ರಾಹುಲ್ ಹೇಳಿದರು.

ಬಹಿರಂಗ ಸಭೆಗೂ ಮುನ್ನ ವಯನಾಡು ಕ್ಷೇತ್ರದ ವಿವಿಧೆಡೆ ರಾಹುಲ್ ಗಾಂಧಿ ಬೃಹತ್ ರೋಡ್ ನಡೆಸಿದಾಗ ಅಪಾರ ಸಂಖ್ಯೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು, ಸಾರ್ವಜನಿಕರು ನೆರೆದಿದ್ದರು.

**ಮಂಡೂಕ ಪಾಠ**
**ಜಿಗಿಜಿಗಿದಾಟ**

### ಬಿಜೆಪಿ ಸೇರಿಕೊಂಡ ಪ್ರಭಾಸ್!





**ದೆಹಲಿ:** ಒಡಿಶಾದ 'ಬಿಜು ಜನತಾ ದಳ' (ಬಿಜೆಡಿ) ಪಕ್ಷದ ಮಾಜಿ ಸಂಸದ ಪ್ರಭಾಸ್ ಕುಮಾರ್ ಸಿಂಗ್, ದೆಹಲಿಯಲ್ಲಿ ಸೋಮವಾರ ಭಾರತೀಯ ಜನತಾ ಪಕ್ಷವನ್ನು (ಬಿಜೆಪಿ) ಸೇರಿದರು. ಬಿಜೆಪಿ ಪ್ರಧಾನ ಕಾರ್ಯದರ್ಶಿ ತರುಣ್ ಛುಗ್ ಪಕ್ಷದ ಕೇಸರಿ-ಹಸಿರು ಬಣ್ಣದ ಶಲ್ಯ ಹೊದಿಸುವ ಮೂಲಕ ಬರಮಾಡಿಕೊಂಡರು. ಬಿಜೆಡಿ ಪಕ್ಷದಲ್ಲಿ ಸ್ವಾಭಿಮಾನಿಗಳು ಇರಲಾಗದು. ಘನತೆ-ಗೌರವ ಬಯಸುವವ ರಿಗೂ ಆ ಪಕ್ಷದಲ್ಲಿರುವುದು ಕಷ್ಟ ಎಂದು ಪ್ರಭಾಸ್ ಹೇಳಿದರು. ವಿಶ್ವದಲ್ಲೇ ಅತ್ಯಂತ ದೊಡ್ಡ ರಾಜಕೀಯ ಪಕ್ಷ ಎನಿಸಿಕೊಂಡಿರುವ ಬಿಜೆಪಿಯನ್ನು ಸೇರುವುದಕ್ಕೆ ಬಹಳ ಹರ್ಷವೆನಿಸುತ್ತಿದೆ. ಪ್ರಧಾನಿ ನರೇಂದ್ರ ಮೋದಿ ಅವರ ವ್ಯಕ್ತಿತ್ವ ಮತ್ತು ಬದ್ಧತೆ-ಆಡಳಿತ ಶೈಲಿಗೆ ಮಾರುಹೋಗಿದ್ದೇನೆ ಎಂದರು.

ಈ ಹಿಂದಿನ ಅವಧಿಯಲ್ಲಿ ಪ್ರಭಾಸ್ ಒಡಿಶಾ ರಾಜ್ಯದ ಬರ್ಘಡಾ ಲೋಕಸಭಾ ಕ್ಷೇತ್ರದಿಂದ ಬಿಜೆಡಿ ಟಿಕೆಟ್‌ನಿಂದ ಗೆದ್ದಿದ್ದರು.

## ಮತದಾನಕ್ಕೆ ಊರಿಗೆ ಹೋಗುವುದೇ ಬೇಡವೇ? ವಲಸೆ ಕಾರ್ಮಿಕರ ಗೊಂದಲ!

**ಕೋಲ್ಕತ್ತ:** ಬಡಗಿ, ಕಟ್ಟಡ ಕಾರ್ಮಿಕ, ಪೇಂಟರ್, ಪ್ಲಂಬರ್, ಸೆಕ್ಯುರಿಟಿ ಗಾರ್ಡ್, ಹೋಟೆಲ್ ಕೆಲಸಗಾರ, ಬೂಟಿಕ್ ಕುಶಲಕರ್ಮಿ, ಮನೆಗೆಲಸ ಮೊದಲಾದ ವೃತ್ತಿಗಳಲ್ಲಿರುವ, ಕಾರ್ಮಿಕರಾಗಿರುವ ಭಾರತದ ಕೋಟ್ಯಂತರ ಮತದಾರರು ಸ್ವಂತ ನೆಲೆಯಿಂದ ದೇಶದ ವಿವಿಧೆಡೆಗೆ ವಲಸೆ ಹೋಗಿದ್ದಾರೆ. ಅವರಲ್ಲಿ ಹೆಚ್ಚಿನವರು 80 ಲೋಕಸಭಾ ಕ್ಷೇತ್ರಗಳಿರುವ ಉತ್ತರ ಪ್ರದೇಶ, 40 ಕ್ಷೇತ್ರಗಳ ಬಿಹಾರ, 14 ಕ್ಷೇತ್ರಗಳ ಜಾಖಂಡ್ ಮೊದಲಾದ ರಾಜ್ಯಗಳವರೇ ಆಗಿದ್ದಾರೆ. ದಕ್ಷಿಣ ಭಾರತದ ಕರ್ನಾಟಕ, ತಮಿಳುನಾಡು, ಕೇರಳ, ಆಂಧ್ರಪ್ರದೇಶ, ಪೂರ್ವದ ಪಶ್ಚಿಮ ಬಂಗಾಳ, ಉತ್ತರದ ದೆಹಲಿ, ಪಶ್ಚಿಮದ ಮಹಾರಾಷ್ಟ್ರ ರಾಜ್ಯಗಳಿಗೆ ಉದ್ಯೋಗ ಅರಸಿ ವಲಸೆ ಹೋಗಿದ್ದಾರೆ. ಈ ಕೋಟ್ಯಂತರ ಮತದಾರರು ಈ ಬಾರಿಯ ಲೋಕಸಭಾ ಚುನಾವಣೆ ಸಂದರ್ಭ ಮತದಾನ ಮಾಡಲು ಹುಟ್ಟೂರಿಗೆ ತೆರಳುವರೇ ಎಂಬ ಪ್ರಶ್ನೆಗೆ ಕೆಲವರಷ್ಟೇ 'ಹೌದು' ಎಂದರೆ, ಬಹಳಷ್ಟು ಮಂದಿ, ಊರಿಗೆ ಹೋಗಿ ಬರಲು ಹಣ ಎಷ್ಟು ಖರ್ಚಾಗುತ್ತದೆ ಎಂಬ ಲೆಕ್ಕಾಚಾರದಲ್ಲಿದ್ದಾರೆ.

ಕೋಲ್ಕತ್ತ, ಹೌರಾ ಸೇರಿದಂತೆ ಪಶ್ಚಿಮ ಬಂಗಾಳದ ವಿವಿಧೆಡೆಗೆ ಕೆಲಸ ಅರಸಿ ಹೋಗಿರುವವರಲ್ಲಿ ಬಿಹಾರ, ಜಾರ್ಖಂಡ್‌ನವರೇ ಅಧಿಕ. ನವಾಡಾ ಜಿಲ್ಲೆಯ ನಿವಾಸಿ ಅಜಿತ್ ಕುಮಾರ್ ಸದ್ಯ ಕೋಲ್ಕತ್ತದಲ್ಲಿ ರಸ್ತೆಬದಿ ಪುಟ್ಟ ಅಂಗಡಿ ಇಟ್ಟುಕೊಂಡಿದ್ದಾರೆ. ಅವರಿರುವ ಜಾಗದಿಂದ ಸ್ವಂತ ಊರಿಗೆ 500 ಕಿಮೀ ಅಂತರವಿದೆ. ಚುನಾವಣೆ ದಿನ ಊರಿಗೆ ಹೋಗಿ ಮತದಾನ ಮಾಡುವಿರಾ? ಎಂಬ ಪ್ರಶ್ನೆಗೆ 'ಹೌದು, ಊರಿಗೆ ಹೋಗುವೆ. ಮತದಾನ ಮಾಡಿದಂತೆಯೂ ಆಗಲಿದೆ. ಕುಟುಂಬದವರು, ಬಂಧು-ಮಿತ್ರರನ್ನೂ ನೋಡಿ ಕೆಲ ದಿನ ಕಾಲ ಕಳೆದಂತೆಯೂ ಆಗಲಿದೆ' ಎಂದರು.

ಪೂರ್ವ ಕೋಲ್ಕತ್ತದಲ್ಲಿ ಪಾನ್ ಅಂಗಡಿ ಇಟ್ಟಿರುವ ಜಾರ್ಖಂಡ್‌ನ ರಾಕೇಶ್ ಕುಮಾರ್, ಇತ್ತೀಚೆಗಷ್ಟೇ ಊರಿಗೆ ಹೋಗಿ ಬಂದೆ. ಪತ್ನಿ, ಪುಟ್ಟ ಮಕ್ಕಳನ್ನೂ ಕರೆತಂದೆ. ಈಗ ಮತದಾನಕ್ಕೆಂದು ಮತ್ತೆ ಅಷ್ಟೊಂದು ದೂರ ಹೋಗಿಬರುವುದು ಕಷ್ಟ ಎನ್ನುತ್ತಾರೆ.

## ಈ ಕ್ಷೇತ್ರ ಗೊತ್ತ?



### ಮುಂಬಯಿ ಸೌತ್

ಒಂದು ಕಾಲದಲ್ಲಿ ಕಾಂಗ್ರೆಸ್‌ನ ಭದ್ರಕೋಟೆ, ಸಮಾಜವಾದಿ, ಕಾರ್ಮಿಕ ನಾಯಕ ಜಾರ್ಜ್ ಫರ್ನಾಂಡೀಸ್ ಅವರನ್ನೂ ಗೆಲ್ಲಿಸಿದ್ದ ಮುಂಬಯಿ ದಕ್ಷಿಣದಲ್ಲಿ ಈಗ ಶಿವಸೇನೆಯ ಪ್ರಾಬಲ್ಯವಿದೆ. ಸದ್ಯ ಉದ್ಧವ್ ಬಣದ ಅರವಿಂದ್ ಸಾವಂತ್ ಇಲ್ಲಿ ಸಂಸದರಾಗಿದ್ದಾರೆ. ಅಷ್ಟೇ ಅಲ್ಲ, ಹಿಂದೆ ಇದು ಮುರಳಿ ದಿಯೋರಾ ಮತ್ತು ಮಿಲಿಂದ್ ದಿಯೋರಾ ಅವರ ಭದ್ರಕೋಟೆ ಕೂಡ ಹೌದು.



**ಇತಿಹಾಸ**

1952ರಲ್ಲಿ ರಚನೆಯಾದ ಈ ಕ್ಷೇತ್ರದಲ್ಲಿ ಕಾಂಗ್ರೆಸ್ 10 ಬಾರಿ ಗೆದ್ದಿದೆ. ಮೊದಲ 3 ಚುನಾವಣೆಗಳಲ್ಲಿ ಕಾಂಗ್ರೆಸ್‌ನ ಎಸ್.ಕೆ. ಪಾಟೀಲ್ ಗೆದ್ದಿದ್ದರು. ಆದರೆ, 1967ರಲ್ಲಿ ಮುಂಬಯಿನಲ್ಲಿ ಕಾರ್ಮಿಕ ಹೋರಾಟಗಳಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಜಾರ್ಜ್ ಫರ್ನಾಂಡೀಸ್ ಅವರು ಆರಿಸಿ ಬಂದಿದ್ದರು. ಇವರು ಸಂಯುಕ್ತ ಸೋಶಿಯಲಿಸ್ಟ್ ಪಾರ್ಟಿಯಿಂದ ಗೆದ್ದಿದ್ದರು. 1971ರಲ್ಲಿ ಕೈಲಾಸ್ ನಾರಾಯಣ್ ನರುಲಾ ಶಿವನಾರಾಯಣ್ ಕಾಂಗ್ರೆಸ್‌ನಿಂದ ಜಯಿಸಿದ್ದರು. 1977 ಮತ್ತು 1980ರಲ್ಲಿ ಜನತಾ ಪಾರ್ಟಿಯ ರತ್ನಸಿಂಗ್ ರಾಜ್ದಾ ಆರಿಸಿಬಂದಿದ್ದರು. 1984ರಿಂದ ಸತತ ಮೂರು ಬಾರಿ ಕಾಂಗ್ರೆಸ್ ನಾಯಕ ಮುರಳಿ ದಿಯೋರಾ ಗೆದ್ದಿದ್ದರೆ, 1996ರಲ್ಲಿ ಮೊದಲ ಬಾರಿಗೆ ಬಿಜೆಪಿಯಿಂದ ಜಯಾವಾಂಟಿಬೆನ್ ಅವರು ಗೆದ್ದಿದ್ದರು. ಮತ್ತೆ 1998ರಲ್ಲಿ ಮುರಳಿ ದಿಯೋರಾ ಗೆದ್ದಿದ್ದರು. 1999ರಲ್ಲಿ ಬಿಜೆಪಿ ಗೆದ್ದಿತ್ತು. 2004 ಮತ್ತು 2009ರಲ್ಲಿ ಮುರಳಿ ದಿಯೋರಾ ಪುತ್ರ ಮಿಲಿಂದ್ ದಿಯೋರಾ ಗೆಲುವು ಸಾಧಿಸಿದ್ದರು. ಆದರೆ, 2014 ಮತ್ತು 2019ರಲ್ಲಿ ಶಿವಸೇನೆಯ ಅರವಿಂದ್ ಸಾವಂತ್ ಅವರು ಗೆಲುವು ಸಾಧಿಸಿದ್ದಾರೆ.
ಈ ಕ್ಷೇತ್ರದಲ್ಲಿ ಶೇ.70 ಹಿಂದೂ, ಶೇ.20 ಮುಸ್ಲಿಂ ಮತ್ತು ಶೇ.10ರಷ್ಟು ಇತರೆ ಧರ್ಮೀಯರಿದ್ದಾರೆ. ಇಲ್ಲಿ ಸಂಪೂರ್ಣವಾಗಿ ನಗರವಾಸಿಗಳೇ ಇದ್ದಾರೆ. ವರ್ಲಿ, ಶಿವಾಡಿ, ಬೈಕುಲಾ, ಮಲಬಾರ್ ಹಿಲ್, ಮುಂಬಾದೇವಿ ಮತ್ತು ಕೋಲಬಾ ವಿಧಾನಸಭಾ ಕ್ಷೇತ್ರಗಳನ್ನು ಒಳಗೊಂಡಿದೆ.

**ಮೂರು ಫಲಿತಾಂಶ**

2009 - ಮಿಲಿಂದ್ ದಿಯೋರಾ
2014 - ಅರವಿಂದ್ ಸಾವಂತ್
2019 - ಅರವಿಂದ್ ಸಾವಂತ್

**ಕ್ಷೇತ್ರ ವಿಶೇಷ**

- ಈ ಕ್ಷೇತ್ರದಲ್ಲಿ ಕಾಂಗ್ರೆಸ್ 10 ಬಾರಿ ಗೆದ್ದಿದೆ.
- ಮುರಳಿ ದಿಯೋರಾ, ಮಿಲಿಂದ್ ದಿಯೋರಾ ಭದ್ರಕೋಟೆ
- ಈಗ ಸತತ ಎರಡು ಬಾರಿ ಗೆದ್ದಿರುವ ಶಿವಸೇನೆ

## ಚುನಾವಣೆ ಆಯೋಗದೆದುರು 55 ದಿನ ನಿರಶನ ಪ್ರತಿಭಟನೆ

**ಪ.ಬಂಗಾಳ ಸಿಎಂ ಮಮತಾ ಬ್ಯಾನರ್ಜಿ ಎಚ್ಚರಿಕೆ**



**ಕೋಲ್ಕತ್ತ:** ಚುನಾವಣಾ ಆಯೋಗದ ಅಧಿಕಾರಿಗಳು ಬಿಜೆಪಿ ಅಭ್ಯರ್ಥಿ ಪರ ಪಕ್ಷಪಾತ ಮಾಡುತ್ತಿದ್ದಾರೆ ಎಂದು ಆರೋಪ ಮಾಡಿರುವ ಪಶ್ಚಿಮ ಬಂಗಾಳ ಸಿಎಂ ಮಮತಾ ಬ್ಯಾನರ್ಜಿ, ಆಯೋಗದ ಕಚೇರಿ ಎದುರು 55 ದಿನಗಳ ನಿರಶನ ಪ್ರತಿಭಟನೆ ಹಮ್ಮಿಕೊಳ್ಳುವುದಾಗಿ ಸೋಮವಾರ ಎಚ್ಚರಿಕೆ ನೀಡಿದ್ದಾರೆ.

ಬಿಜೆಪಿ ಸೂಚನೆ ಮೇರೆಗೆ ಮುರ್ಷಿದಾಬಾದ್‌ನ ಡಿಐಜಿಯನ್ನು ಬದಲಾಯಿಸಲಾಗಿದೆ. ಈಗ ಮುರ್ಷಿದಾಬಾದ್ ಮತ್ತು ಮಾಲ್ಡಾದಲ್ಲಿ ಗಲಭೆಗಳು ನಡೆದರೆ ಅದರ ಜವಾಬ್ದಾರಿ ಚುನಾವಣಾ ಆಯೋಗದ ಮೇಲಿರುತ್ತದೆ, ಗಲಭೆ ಮತ್ತು ಹಿಂಸಾಚಾರವನ್ನು ಪ್ರಚೋದಿಸಲು ಪೊಲೀಸ್ ಅಧಿಕಾರಿಗಳನ್ನು ಬದಲಾಯಿಸಲು ಬಿಜೆಪಿ ಬಯಸಿದೆ. ರಾಜ್ಯದಲ್ಲಿ ಒಂದೇ ಒಂದು ಕೋಮುಗಲಭೆ ನಡೆದರೂ ಆಯೋಗದ ಕಚೇರಿ ಎದುರು ಅನ್ನ-ನೀರು ತ್ಯಜಿಸಿ ಉಪವಾಸ ಧರಣಿ ನಡೆಸುವೆ ಎಂದು ತೃಣಮೂಲ ಕಾಂಗ್ರೆಸ್ ಪಕ್ಷದ (ಟಿಎಂಸಿ) ನಾಯಕಿ ಬೆದರಿಕೆ ಹಾಕಿದ್ದಾರೆ.

ಈಗ ರಾಜ್ಯದಲ್ಲಿ ಚುನಾವಣಾ ಆಯೋಗವೇ ಕಾನೂನು-ಸುವ್ಯವಸ್ಥೆ ನೋಡಿಕೊಳ್ಳುತ್ತಿದೆ. ಒಂದು ವೇಳೆ ರಾಜ್ಯದಲ್ಲಿ ಗಲಭೆ ನಡೆದರೆ ಜವಾಬ್ದಾರಿಯನ್ನೂ ಹೊರಬೇಕಾಗುತ್ತದೆ ಎಂದು ಮಮತಾ ಹೇಳಿದ್ದಾರೆ.

ಸಿಂಗೂರಿನಲ್ಲಿ ಭೂಸ್ವಾಧೀನ ವಿರೋಧಿ ಪ್ರತಿಭಟನೆ ಸಂದರ್ಭ ನಾನು 26 ದಿನಗಳ ಕಾಲ ರೈತರಿಗಾಗಿ ಉಪವಾಸ ಮಾಡಿದ್ದೆ. ಈಗ ನಿಮ್ಮ ಕಚೇರಿ ಎದುರು 55 ದಿನ ಉಪವಾಸ ನಡೆಸಬಲ್ಲೆ ಎಂದಿದ್ದಾರೆ.

## ತ.ನಾಡು ಚುನಾವಣಾಧಿಕಾರಿಗಳಿಂದ ರಾಹುಲ್ ಹೆಲಿಕಾಪ್ಟರ್ ತಪಾಸಣೆ




**ನೀಲಗಿರಿ:** ಕೇರಳದ ವಯನಾಡಿಗೆ ಲೋಕಸಭಾ ಚುನಾವಣಾ ಪ್ರಚಾರಕ್ಕೆ ಹೆಲಿಕಾಪ್ಟರ್‌ನಲ್ಲಿ ತೆರಳುತ್ತಿದ್ದ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರ ಹೆಲಿಕಾಪ್ಟರನ್ನು ತಮಿಳುನಾಡಿನಲ್ಲಿ ಚುನಾವಣಾಧಿಕಾರಿಗಳು ಸೋಮವಾರ ತಪಾಸಣೆ ನಡೆಸಿದ್ದಾರೆ.

ರಾಹುಲ್ ಅವರ ಹೆಲಿಕಾಪ್ಟರ್ ತಮಿಳುನಾಡಿನ ನೀಲಗಿರಿ ಜಿಲ್ಲೆಯಲ್ಲಿ ನಿರ್ಮಿಸಿದ್ದ ಹೆಲಿಪ್ಯಾಡ್‌ನಲ್ಲಿ ಲ್ಯಾಂಡ್ ಆಗುತ್ತಿದ್ದಂತೆಯೇ ಸ್ಥಳದಲ್ಲೇ ಕಾಯುತ್ತಿದ್ದ ಚುನಾವಣಾ ಆಯೋಗದ ಫ್ಲೈಯಿಂಗ್ ಸ್ಕ್ವಾಡ್ ತಂಡದ ಅಧಿಕಾರಿಗಳು ಹೆಲಿಕಾಪ್ಟರ್‌ನಲ್ಲಿ ಶೋಧ ಕಾರ್ಯ ನಡೆಸಿದರು. ಶೋಧದ ಪರಿಣಾಮ ಏನಾಯಿತು ಎಂಬ ಮಾಹಿತಿ ಯನ್ನು ಅಧಿಕಾರಿಗಳನ್ನು ನೀಡಿಲ್ಲ. ರಾಹುಲ್ ಕೇರಳದ ವಯನಾಡು ಲೋಕಸಭಾ ಕ್ಷೇತ್ರದಲ್ಲಿ ಸಾರ್ವಜನಿಕ ಸಭೆ ಮತ್ತು ಪ್ರಚಾರ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ಹೆಲಿಕಾಪ್ಟರ್ ಮೂಲಕ ಸಂಚಾರ ನಡೆಸಿದ್ದರು. ಮಾರ್ಗ ಮಧ್ಯೆ ನೀಲಗಿರಿಯಲ್ಲಿ ಸ್ವಲ್ಪ ಸಮಯದವರೆಗೆ ಹೆಲಿಕಾಪ್ಟರ್ ಇಳಿಸಲಾಗಿತ್ತು ಎಂದು ವರದಿ ವಿವರಿಸಿದೆ.

## ಮೊದಲ ಹಂತ ಚುನಾವಣೆ ಇನ್ನು 3 ದಿನಗಳಷ್ಟೇ ಬಾಕಿ

**13 ರಾಜ್ಯ, 4 ಕೇಂ.ಪ್ರದೇಶಗಳ 102 ಕ್ಷೇತ್ರ**





**ದೆಹಲಿ:** ಪ್ರಸಕ್ತ ಲೋಕಸಭಾ ಚುನಾವಣೆಯ ಮೊದಲ ಹಂತದಲ್ಲಿ 13 ರಾಜ್ಯಗಳು ಮತ್ತು 4 ಕೇಂದ್ರಾಡಳಿತ ಪ್ರದೇಶಗಳ ಒಟ್ಟು 102 ಲೋಕಸಭಾ ಕ್ಷೇತ್ರಗಳಿಗೆ ಇದೇ ಶುಕ್ರವಾರ(ಏ.19) ಮತದಾನವಾಗಲಿದ್ದು, ಎಲ್ಲಾ ಅಗತ್ಯ ಸಿದ್ಧತೆಗಳನ್ನೂ ಮಾಡಿಕೊಂಡಿರುವುದಾಗಿ ಚುನಾವಣಾ ಆಯೋಗ ಹೇಳಿದೆ.

ದೇಶದ 543 ಲೋಕಸಭಾ ಕ್ಷೇತ್ರಗಳಿಗೆ ಒಟ್ಟು 7 ಹಂತಗಳಲ್ಲಿ ಚುನಾವಣೆ ನಡೆಸಲು ಯೋಜಿಸಿರುವ ಚುನಾವಣಾ ಆಯೋಗ, ತಮಿಳುನಾಡಿನ ಎಲ್ಲಾ 39 ಲೋಕಸಭಾ ಕ್ಷೇತ್ರಗಳಿಗೂ ಒಂದೇ ಹಂತದಲ್ಲಿ ಮತದಾನ ನಿಗದಿಪಡಿಸಿರುವುದು ವಿಶೇಷ. ದೇಶದಲ್ಲೇ ಅತಿ ಹೆಚ್ಚು ಅಂದರೆ 80 ಲೋಕಸಭಾ ಕ್ಷೇತ್ರಗಳನ್ನು ಹೊಂದಿರುವ ಉತ್ತರ ಪ್ರದೇಶದಲ್ಲಿ ಮೊದಲ ಹಂತದಲ್ಲಿ 8 ಕ್ಷೇತ್ರಗಳಿಗಷ್ಟೇ ಮತದಾನವಾಗಲಿದೆ.

ತಮಿಳುನಾಡು ರಾಜ್ಯ-39 ಲೋಕಸಭಾ ಕ್ಷೇತ್ರಗಳು, ರಾಜಸ್ಥಾನ-12, ಉತ್ತರ ಪ್ರದೇಶ-8, ಮಧ್ಯ ಪ್ರದೇಶ-6, ಮಹಾರಾಷ್ಟ್ರ-5, ಉತ್ತರಾಖಂಡ-5, ಅಸ್ಸಾಂ-5, ಬಿಹಾರ-4, ಪಶ್ಚಿಮ ಬಂಗಾಳ-3, ಅರುಣಾಚಲ ಪ್ರದೇಶ-2, ಮಣಿಪುರ-2, ಮೇಘಾಲಯ-2 ಕ್ಷೇತ್ರಗಳಲ್ಲಿ ಮತದಾನವಾಗಲಿದೆ. ಉಳಿದಂತೆ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು-1 ಕ್ಷೇತ್ರ, ಛತ್ತೀಸಗಢ-1, ಜಮ್ಮು-ಕಾಶ್ಮೀರ-1, ಲಕ್ಷದ್ವೀಪ-1, ಮಿಜೋರಾಂ-1, ನಾಗಾಲ್ಯಾಂಡ್-1, ಪುದುಚೇರಿ-1, ಸಿಕ್ಕಿಂ-1 ಮತ್ತು ತ್ರಿಪುರ-1 ಲೋಕಸಭಾ ಕ್ಷೇತ್ರದಲ್ಲಿ ಮತದಾನವಾಗಲಿದೆ.

## ಎಡಪಂಥೀಯ ಸರಕಾರದಿಂದ ಅಭಿವೃದ್ಧಿ ಕಾರ್ಯಗಳಿಗೆ ಅಡ್ಡಿ

**ಒಂದೇ ದಿನ ಕೇರಳದ ಕುನ್ನಂಕುಲಂ, ಕಟ್ಟಕ್ಕಡದಲ್ಲಿ ಪ್ರಚಾರ ಸಭೆ ನಡೆಸಿದ ಪ್ರಧಾನಿ ನರೇಂದ್ರ ಮೋದಿ**

**ತ್ರಿಶೂರ್:** ಪ್ರಸಕ್ತ ಲೋಕಸಭಾ ಚುನಾವಣೆ ನಂತರ ದೇಶದ ಸಂಸತ್ತಿನಲ್ಲಿ ದೇವರ ಸ್ವಂತ ನಾಡಿನ ಜನರ ಧ್ವನಿ ದೊಡ್ಡದಾಗಿ ಕೇಳಿಸಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಕೇರಳದ ಜನತೆಗೆ ಭರವಸೆ ನೀಡಿದ್ದಾರೆ.

ಕೇರಳದ ತ್ರಿಶೂರ್‌ನಲ್ಲಿ ಸೋಮವಾರ ಚುನಾವಣಾ ಪ್ರಚಾರ ಕೈಗೊಂಡ ಪ್ರಧಾನಿ ಮೋದಿ, ಬಿಜೆಪಿ ಮತ್ತು ಎನ್‌ಡಿಎ ಮಿತ್ರಪಕ್ಷಗಳ ಅಭ್ಯರ್ಥಿಗಳ ಪರ ಭರ್ಜರಿ ಪ್ರಚಾರ ನಡೆಸಿದರು.

ಕೇಂದ್ರ ಸರಕಾರ ಆರಂಭಿಸಿದ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಕೇರಳದಲ್ಲಿನ ಎಡಪಂಥದ ಸರಕಾರ ಅಡ್ಡಿಪಡಿಸುತ್ತಿದೆ. ಎಡರಂಗದ ಪಕ್ಷಗಳು ಹಿಂದೆ ಅಧಿಕಾರದಲ್ಲಿದ್ದ ರಾಜ್ಯಗಳಲ್ಲಿ ಮಾಡಿದಂತೆಯೇ ಕೇರಳವನ್ನೂ ಹಾಳುಮಾಡಿವೆ ಎಂದು ಸಿಪಿಐ(ಎಂ) ಸರಕಾರದ ವಿರುದ್ಧ ವಾಗ್ದಾಳಿ ನಡೆಸಿದರು.



ಕೇರಳದಲ್ಲಿ 2024 ಪ್ರಗತಿಯ ವರ್ಷವಾಗಲಿದೆ ಎಂದ ಮೋದಿ, ಬಿಜೆಪಿ ಪ್ರಣಾಳಿಕೆಯಲ್ಲಿ ಉಲ್ಲೇಖಿಸಿದ 'ಮೋದಿ ಕಿ ಗ್ಯಾರಂಟಿ' ಮತ್ತು ಭರವಸೆಗಳು ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳು ಕೇರಳದ ಜನರನ್ನೂ ತಲುಪಲಿವೆ ಎಂದರು.

ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟದ ಸರಕಾರ ಕೇಂದ್ರದಲ್ಲಿ 3ನೇ ಬಾರಿಗೆ ಅಧಿಕಾರಕ್ಕೆ ಬಂದ ನಂತರ ಅಹಮದಾಬಾದ್ ಮತ್ತು ಮುಂಬೈ ನಡುವಿನ ಬುಲೆಟ್ ರೈಲು ಸಂಚಾರ ಆರಂಭಿಸಲಿದೆ. ಅಷ್ಟೇ ಅಲ್ಲ, ಉತ್ತರ, ಪೂರ್ವ ಮತ್ತು ದಕ್ಷಿಣ ಭಾರತದಲ್ಲಿಯೂ ವೇಗದ ಬುಲೆಟ್ ರೈಲು ಸೇವೆ ಆರಂಭವಾಗಲಿದೆ. ಅದರ ಸಮೀಕ್ಷೆ ಕಾರ್ಯ ಚುನಾವಣೆ ನಂತರ ಪ್ರಾರಂಭಿಸಲಾಗುವುದು ಎಂದರು.

ಕಾಂಗ್ರೆಸ್ ವಿಶ್ವದೆಲ್ಲೆಡೆಯೂ ಭಾರತದ ಬಗ್ಗೆ ಕೆಟ್ಟ ಅಭಿಪ್ರಾಯವನ್ನು ಸೃಷ್ಟಿಸುತ್ತಿದೆ. ಬದಲಾಗಿ ಬಿಜೆಪಿ ಬಲಿಷ್ಠ ರಾಷ್ಟ್ರ ನಿರ್ಮಿಸುತ್ತಿದೆ. ಕಳೆದ 10 ವರ್ಷಗಳಲ್ಲಿ ಎನ್‌ಡಿಎ ಆಡಳಿತ ಕಾಲದಲ್ಲಿ ದೇಶದಲ್ಲಿ ಏನೇನು ಅಭಿವೃದ್ಧಿಯಾಗಿದೆ ಎಂಬುದು ಕೇವಲ ಟ್ರೇಲರ್ ಅಷ್ಟೇ. ಕೇರಳ ಸೇರಿದಂತೆ ದೇಶದ ಎಲ್ಲಾ ರಾಜ್ಯಗಳಲ್ಲಿಯೂ ಇನ್ನೂ ಹೆಚ್ಚಿನ ಪ್ರಗತಿಯನ್ನು ದಾಖಲಿಸಬೇಕಿದೆ ಎಂದು ಮೋದಿ ಹೇಳಿದರು.

ಸೋಮವಾರ ಒಂದೇ ದಿನ ಕುನ್ನಂಕುಲಂನಲ್ಲಿ ಸಾರ್ವಜನಿಕ ಸಭೆ, ತಿರುವನಂತಪುರಂ ಜಿಲ್ಲೆಯ ಕಟ್ಟಕ್ಕಡದಲ್ಲಿ ಮತ್ತೊಂದು ಪ್ರಚಾರ ಸಭೆ ನಡೆಸಿದರು. ಮಾ.19ರಂದು ಪಾಲಕ್ಕಾಡ್ ಜಿಲ್ಲೆಯಲ್ಲಿ ಬೃಹತ್ ರೋಡ್ ಶೋ ನಡೆಸಿದರು. ಕೇರಳಕ್ಕೆ ಪ್ರಧಾನಿ 6ನೇ ಭೇಟಿ ಇದಾಗಿದೆ. ಕೇರಳದಲ್ಲಿನ ಎಲ್ಲಾ 20 ಲೋಕಸಭಾ ಕ್ಷೇತ್ರಗಳಿಗೂ ಏ.26ರಂದು ಒಂದೇ ಹಂತದಲ್ಲಿ ಮತದಾನ ನಡೆಯಲಿದೆ.

### ಬಡವರ ಲೂಟಿ

ಕರುವನ್ನೂರ್ ಸಹಕಾರಿ ಬ್ಯಾಂಕ್ ಹಗರಣ ಉಲ್ಲೇಖಿಸಿದ ಪ್ರಧಾನಿ ಮೋದಿ, ಎಡಪಕ್ಷಗಳು ಬಡವರ ಹಣ ಲೂಟಿ ಮಾಡಿವೆ ಎಂದು ಸಿಪಿಐ(ಎಂ) ನೇತೃತ್ವದ ರಾಜ್ಯ ಸರಕಾರದ ವಿರುದ್ಧ ವಾಗ್ದಾಳಿ ನಡೆಸಿದರು.



ಧರ್ಮಶಾಲಾಕ್ಕೆ ಸೋಮವಾರ ಭೇಟಿ ನೀಡಿದ ಬಾಲಿವುಡ್ ನಟಿ, ಹಿಮಾಚಲ ಪ್ರದೇಶದ ಮಂಡಿ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕಂಗನಾ ರಣಾವತ್ ಅವರು ಟಿಬೆಟಿಯನ್ ಬೌದ್ಧ ಧರ್ಮಗುರು ದಲೈಲಾಮಾ ಅವರ ಆಶೀರ್ವಾದ ಪಡೆದುಕೊಂಡರು. ಧರ್ಮಗುರುವಿನ ಈ ಭೇಟಿ ಅಮೋಘ. ಜೀವಮಾನವಿಡೀ ನೆನಪಿನಲ್ಲಿರುವ ಘಟನೆ ಎಂದು ಕಂಗನಾ ಹೇಳಿದ್ದಾರೆ.